# ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2021-22ನೇ ಸಾಲಿನಲ್ಲಿ ಬಿ.ಎಡ್ ಹಾಗೂ ಡಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿಧ್ಯಾರ್ಥಿಗಳಿಗೆ ರೂ. 25,000/-ಗಳ ವಿಶೇಷ ಪ್ರೋತ್ಸಾಹಧನ ಮಂಜೂರು ಮಾಡುವ ಕುರಿತು

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 159 ಎಂಡಿಎಸ್ 2021, ಬೆಂಗಳೂರು ದಿ: 12.04.2021.
2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 159 ಎಂಡಿಎಸ್ 2021, ಬೆಂಗಳೂರು ದಿ:27.04.2021.
3. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 279 ಎಂಡಿಎಸ್ 2018 ದಿನಾಂಕ: 15.10.2018 & 22.11.2018.
4. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 209 ಎಂಡಿಎಸ್ 2021, ಬೆಂಗಳೂರು ದಿನಾಂಕ: 27.04.2021.

>>>()<<<

**ಪ್ರಸ್ತಾವನೆ:-**

ಉಲ್ಲೇಖ(1) ಮತ್ತು (2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ 2020-21ನೇ ಆರ್ಥಿಕ ಸಾಲಿನಲ್ಲಿ ಚಾಲ್ತಿಯಲ್ಲಿದ ಯೋಜನೆಗಳನ್ನು 2021-22ನೇ ಸಾಲಿಗೆ ಮುಂದುವರೆಸಲಾಗಿದೆ. ಅದರಲ್ಲಿ ಉತ್ತೇಜನ ಯೋಜನೆಗೆ ರೂ. 800.00 ಲಕ್ಷ (ರೂ. ಎಂಟುನೂರು ಲಕ್ಷ ರೂ ಮಾತ್ರ)ಗಳನ್ನು ಒದಗಿಸಲಾಗಿದೆ. ಸದರಿ ಯೋಜನೆಗಳಿಗೆ 2021-22ನೇ ಸಾಲಿನಲ್ಲಿ ಮಂಜೂರಾಗಿರುವ ಆಯವ್ಯಯದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಈ ಪೈಕಿ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಬಿ.ಎಡ್ ಹಾಗೂ ಡಿ.ಎಡ್ ವಿಶೇಷ ಪ್ರೋತ್ಸಾಹಧನ ಕಾರ್ಯಕ್ರಮಕ್ಕಾಗಿ ಜಿಲ್ಲಾವಾರು ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಅನ್ವಯ ಸಂಬಂಧಪಟ್ಟ ಜಿಲ್ಲೆಗಳಿಗೆ ಅನುದಾನ ರೂ. 50.00 ಲಕ್ಷ (ರೂ. ಐವತ್ತು ಲಕ್ಷಗಳು ಮಾತ್ರ)ಗಳನ್ನು ಸಂಬಂಧಪಟ್ಟ ಆಯಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರವರಿಗೆ ಮರು ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

## ಆದೇಶ

**ಸಂಖ್ಯೆ:ಅಸಂನಿ/ಬಿ.ಎಡ್-ಡಿ.ಎಡ್/ಸಿಆರ್-02/2021-22** **ದಿನಾಂಕ:** 28 **-05-2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ "ಬಿ.ಎಡ್ ಹಾಗೂ ಡಿ.ಎಡ್ ವಿಶೇಷ ಪ್ರೋತ್ಸಾಹಧನ" ಕಾರ್ಯಕ್ರಮವನ್ನು ಜಾರಿಗೊಳಿಸಲು 2021-22ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಪೈಕಿ ರೂ.50.00 ಲಕ್ಷ (ರೂ. ಐವತ್ತು ಲಕ್ಷಗಳು ಮಾತ್ರ)ಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಆಯಾ ಜಿಲ್ಲೆ ಮುಂದೆ ತೋರಿಸಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

**ನಿಬಂಧನೆಗಳು:-**

1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 279 ಎಂಡಿಎಸ್ 2018 ದಿನಾಂಕ: 15.10.2018 ಹಾಗೂ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 279 ಎಂಡಿಎಸ್ 2018 ದಿನಾಂಕ: 22.11.2018 ರಂತೆ ನೀಡಲಾಗಿರುವ ಸೂಚನೆಗಳನ್ನು ಸದರಿ ಯೋಜನೆಗೆ ಅನುಷ್ಠಾನಗೊಳಿಸತಕ್ಕದ್ದು/ ವೆಚ್ಚ ಮಾಡುವುದು.

ಪು.ತಿ.ನೋ.......2

2. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:ಅಸಂನಿ:ಬಿಎಡ್/ಡಿಎಡ್/ಸಿಆರ್-01/2018-19, ದಿನಾಂಕ: 07-11-2018 ಹಾಗೂ ನಿರ್ದೇಶನಾಲಯದ ಸುತ್ತೋಲೆ-2 ಸಂಖ್ಯೆ:ಅಸಂನಿ:ಬಿಎಡ್/ ಡಿಎಡ್/ಸಿಆರ್-01/2019-20, ದಿನಾಂಕ:17-07-2019 ರಂತೆ ಅರ್ಹ ಅರ್ಜಿಗಳಿಗೆ ಅನುದಾನ ಮಂಜೂರು ಮಾಡುವುದು.
3. ಸ್ವೀಕೃತ ಅರ್ಜಿಗಳನ್ನು ಅಗಿಂದಾಗ್ಗೆ ಹೊರಡಿಸಲಾಗಿರುವ ಆದೇಶ, ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳ/ಷರತ್ತುಗಳಂತೆ ಕೂಲಂಕುಶವಾಗಿ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಅನುದಾನ ನೀಡತಕ್ಕದ್ದು ಯಾವುದೇ ತಪ್ಪಾಗಿದ್ದಲ್ಲಿ ಮುಂದೆ ಆಗು ಹೋಗುಗಳಿಗೆ ನೇರವಾಗಿ ಜಿಲ್ಲೆಯ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು ರವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
4. ಜಿಲ್ಲೆಗಳಿಂದ ಸ್ವೀಕರಿಸಿದ ಅರ್ಹ ವಿದ್ಯಾರ್ಥಿಗಳ ಮಾಹಿತಿಯನ್ವಯ, ಅನುದಾನ ಲಭ್ಯತೆಯನುಸಾರ ಜಿಲ್ಲಾವಾರು ಬಿಡುಗಡೆ ಮಾಡಲಾಗಿದೆ. ಉಳಿದ ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾದಲ್ಲಿ ಮುಂದಿನ ಕಂತುಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು.
5. ಬಿಡುಗಡೆ ಮಾಡಿರುವ ಮೊತ್ತಕ್ಕೆ ಸಂಬಂಧಿಸಿದ ವೆಚ್ಚದ ಬಳಕೆ ಪ್ರಮಾಣ ಪತ್ರವನ್ನು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಇದಕ್ಕೆ ತಗಲುವ ವೆಚ್ಚವನ್ನು ಆಬ್ಜೆಕ್ಟ್ ಕೋಡ್ (051) ಲೆಕ್ಕಶೀರ್ಷಿಕೆ 2225-04-277-0-03 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ, ರಾಜ್ಯವಲಯ ಯೋಜನೆಯಡಿ 2021-22ರಲ್ಲಿ ಭರಿಸುವುದು.

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು:-**
1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
5. ಜಿಲ್ಲಾ ಆಯುಕ್ತರು, ಜಿಲ್ಲಾ ಆಯುಕ್ತಾಲಯ, ಬೆಂಗಳೂರು.
6. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
7. ಸಂಬಂಧಪಟ್ಟ ಉಪ-ನಿದೇರ್ಶಕರು/ಜಿಲ್ಲಾ ಖಜಾನಾಧಿಕಾರಿಗಳು.
8. ಲೆಕ್ಕ ಪತ್ರ ಶಾಖೆ
9. ಕಛೇರಿ ಪ್ರತಿ
10. ಹೆಚ್ಚುವರಿ ಪ್ರತಿ.

# ಅಲ್ಪಸಂಖ್ಯಾತರ ನಿರ್ದೇಶನಾಲಯ

## ಬಿ.ಎಡ್ ಹಾಗೂ ಡಿ.ಎಡ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ 2021-22ನೇ ಸಾಲಿನಲ್ಲಿ ವಿಶೇಷ ಪ್ರೋತ್ಸಾಹಧನ ಬಿಡುಗಡೆ ಮಾಡಿದ ವಿವರ

ಈ ಕಛೇರಿ ಆದೇಶ ಸಂಖ್ಯೆ:ಅಸಂನಿ/ಬಿ.ಎಡ್-ಡಿ.ಎಡ್/ಸಿಆರ್-02/2021-22
ದಿನಾಂಕ:28-05-2021ಕ್ಕೆ ಅನುಬಂಧ

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಬಿಡುಗಡೆ ಮಾಡಿದ ಅನುದಾನ | |
|---|---|---|---|
| | | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 7 | 1.75 |
| 2 | ಬೆಳಗಾವಿ | 6 | 1.50 |
| 3 | ಬಳ್ಳಾರಿ | 9 | 2.25 |
| 4 | ಬೀದರ್ | 32 | 8.00 |
| 5 | ವಿಜಯಪುರ | 22 | 5.50 |
| 6 | ಚಿತ್ರದುರ್ಗ | 9 | 2.25 |
| 7 | ದಕ್ಷಿಣ ಕನ್ನಡ | 5 | 1.25 |
| 8 | ದಾವಣಗೆರೆ | 14 | 3.50 |
| 9 | ಧಾರವಾಡ | 11 | 2.75 |
| 10 | ಕಲಬುರಗಿ | 39 | 9.75 |
| 11 | ಹಾವೇರಿ | 9 | 2.25 |
| 12 | ಕೋಲಾರ | 4 | 1.00 |
| 13 | ಕೊಪ್ಪಳ | 7 | 1.75 |
| 14 | ಮೈಸೂರು | 7 | 1.75 |
| 15 | ರಾಯಚೂರು | 14 | 3.50 |
| 16 | ಶಿವಮೊಗ್ಗ | 5 | 1.25 |
| **ಒಟ್ಟು** | | **200** | **50.00** |

(ರೂ. ಐವತ್ತು ಲಕ್ಷಗಳು ಮಾತ್ರ)

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.